# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1336

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 17.12.2025

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಸಂಸ್ಥೆಯಲ್ಲಿ ಅವಧಿ ಮೀರಿರುವ ವಾಹನಗಳ ಸಂಖ್ಯೆ ಎಷ್ಟು; ಸಾರಿಗೆಗೆ ಯೋಗ್ಯವಲ್ಲದ ವಾಹನಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಕೇಂದ್ರ ಸರ್ಕಾರದ ಆದೇಶದನ್ವಯ ಸರ್ಕಾರಿ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಿದ್ದು, ಸದರಿ ಅವಧಿ ಮೀರಿರುವ ಬಸ್‌ಗಳು ನಿಗಮಗಳಲ್ಲಿ ಯಾವುದು ಕಾರ್ಯಾಚರಣೆಯಲ್ಲಿರುವುದಿಲ್ಲ.<br>ಮುಂದುವರೆದು, ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ **ಈ ಕೆಳಕಂಡ ಮಾದರಿಯ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ನಿಗಧಿಪಡಿಸಿರುವ ಬಸ್ ಕ್ರಮಿಸಿರುವ ಕಿ.ಮೀ ಮತ್ತು ಬಸ್‌ಗಳ ವಯೋಮಾನದ ವಿವರ ಕೆಳಕಂಡಂತಿದೆ:-** |

| ಕ್ರ.ಸಂ | ವಾಹನ ತಯಾರಿಕೆ/ ಮಾದರಿ | ನಿಗಧಿಪಡಿಸಿರುವ ಕಿ.ಮೀ. /ವರ್ಷ |
|---|---|---|
| 1 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಕರ್ನಾಟಕ ಸಾರಿಗೆ, ರಾಜಹಂಸ / ವೈಭವ, ನಾನ್ ಎ.ಸಿ. ಸ್ಲೀಪರ್ ವಾಹನಗಳು (ಮಿಡಿ, ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ) | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 2 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು.(ಕಾರು/ಜೀಪು ಹೊರತುಪಡಿಸಿ) | 9.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 3 | ವೋಲ್ವೋ ನಗರ ಸಾರಿಗೆ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 4 | ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು | 15.00 ಲಕ್ಷ ಕಿ.ಮೀ. ಅಥವಾ 15 ವರ್ಷ |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>5</td><td>ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು</td><td>13.00 ಲಕ್ಷ ಕಿ.ಮೀ. ಅಥವಾ 15 ವರ್ಷ</td></tr>
<tr><td>6</td><td>ಸ್ಕ್ಯಾನಿಯ ಸೀಟರ್ ವಾಹನಗಳು</td><td>13.00 ಲಕ್ಷ ಕಿ.ಮೀ. ಅಥವಾ 15 ವರ್ಷ</td></tr>
<tr><td>7</td><td>ಕರೋನಾ ಎ.ಸಿ. ಮತ್ತು ನಾನ್ ಎ.ಸಿ. ಸ್ಲೀಪರ್ ವಾಹನಗಳು</td><td>11.00 ಲಕ್ಷ ಕಿ.ಮೀ. ಅಥವಾ 15 ವರ್ಷ</td></tr>
</table>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಹೊರಡಿಸಿರುವ ಸುತ್ತೋಲೆ ಸಂಖ್ಯೆ:810/2023 ದಿನಾಂಕ:23.09.2023 ರನ್ವಯ ನಿಗಮದಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು 'ಅನುಬಂಧ'ದಲ್ಲಿ ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ. ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿಮೀ ಕ್ರಮಿಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳಿಗೆ ಅವಶ್ಯವಿದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.
ಆದಾಗ್ಯೂ, ಪ್ರತಿ ವರ್ಷ ನಿಗಮದ ಬಸ್‌ಗಳನ್ನು v ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ.
</td></tr>
<tr><td>ಆ.</td><td>ಅವಧಿ ಮೀರಿರುವ ವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಬೇಕಾಗಿರುವ ಒಟ್ಟು ವಾಹನಗಳೆಷ್ಟು;</td><td>
ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಅವಧಿ ಮೀರಿರುವ ವಾಹನಗಳು ಯಾವುದೂ ಇರುವುದಿಲ್ಲ.
ಆದಾಗ್ಯೂ, ಮುಂಬರುವ ದಿನಗಳಲ್ಲಿ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಈ ಕೆಳಕಂಡಂತೆ ಬಸ್ಸುಗಳನ್ನು ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ:-
<table>
<tr><th>ಸಂಸ್ಥೆಗಳು</th><th>ಅಂದಾಜು ಬಸ್‌ಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>644</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>712</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>700</td></tr>
<tr><td>ಕ.ಕ.ರ.ಸಾ.ನಿಗಮ</td><td>750</td></tr>
<tr><td>ಒಟ್ಟು</td><td>2806</td></tr>
</table>
</td></tr>
</table>

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಮೇಲ್ಕಂಡ ಬಸ್ಸುಗಳನ್ನು ನಿಗಮಗಳಲ್ಲಿ ಸೇರ್ಪಡೆಗೊಳಿಸುವ ಪ್ರಸ್ತಾವನೆಗಳು ಪ್ರಸ್ತುತ ಪರಿಶೀಲನೆಯಲ್ಲಿರುತ್ತದೆ.<br><br>ರಾಜ್ಯದ ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳಲ್ಲಿ 2023-24 ರಿಂದ 2025-26ರವರೆಗೆ ಖರೀದಿಸಿರುವ/ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-<br><br>
<table>
<tr><th>ಸಂಸ್ಥೆಗಳು</th><th>2023-24 (Jan)</th><th>2024-25</th><th>2025-26</th><th>ಒಟ್ಟು</th></tr>
<tr><td>ಕ.ರಾ.ರ.ಸಾ.ನಿಗಮ</td><td>510</td><td>698</td><td>80*</td><td>1288</td></tr>
<tr><td rowspan="2">ಬೆಂ.ಮ.ಸಾ.ಸಂಸ್ಥೆ</td><td>20 ಡೀಸೆಲ್</td><td>820 ಡೀಸೆಲ್</td><td>-</td><td rowspan="2">2275</td></tr>
<tr><td>341 ಇ.ವಿ</td><td>755 ಇ.ವಿ</td><td>339 ಇ.ವಿ</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>296</td><td>560</td><td>311**</td><td>1167</td></tr>
<tr><td>ಕ.ಕ.ರ.ಸಾ.ನಿಗಮ</td><td>720</td><td>307</td><td>94</td><td>1121</td></tr>
<tr><td>ಒಟ್ಟು</td><td>1887</td><td>3140</td><td>824</td><td>5851</td></tr>
</table>
<br>* ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 70 ನಾನ್ ಎ.ಸಿ.ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.<br><br>**ಪ್ರಸಕ್ತ 2025-26ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಹಂಚಿಕೆಯಾಗಿರುವ 300 ಹೊಸ ಬಸ್‌ಗಳ ಟೆಂಡರ್ ಆಹ್ವಾನಿಸಲಾಗಿದ್ದು, ಖರೀದಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.</td></tr>
<tr><td>ಇ.</td><td>ವೋಲ್ವೋ ವಾಹನಗಳು ಸಂಚಾರಕ್ಕೆ ಯೋಗ್ಯವಾಗಿರಲು ಎಷ್ಟು ಕಿ.ಮೀ.ಗಳನ್ನು ನಿಗದಿಪಡಿಸಿದೆ; ಹಾಗೂ ಅವಧಿ ಮೀರಿದ ಎಷ್ಟು ವೋಲ್ವೋ ವಾಹನಗಳು ಸಂಚರಿಸುತ್ತಿವೆ;</td><td>ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ವೋಲ್ವೋ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲು 15.00 ಲಕ್ಷ ಕಿ.ಮೀ ಅಥವಾ 15 ವರ್ಷಗಳ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ. ಆದಾಗ್ಯೂ ಬಸ್‌ಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ.<br><br>ಬಸ್‌ಗಳು ಸುಸ್ಥಿಯಲ್ಲಿದ್ದಲ್ಲಿ ಮಾತ್ರ ನಿಗದಿಪಡಿಸಿದ ಕಿ.ಮೀ ಕ್ರಮಿಸಿದ್ದರೂ ಸಹ 15 ವರ್ಷ ವಯೋಮಾನ ಪೂರೈಸುವವರೆಗೂ ಕಾರ್ಯಾಚರಣೆಗೆ ನಿಯೋಜಿಸುತ್ತಿದ್ದು, ಸದರಿ ಅವಧಿ ಮೀರಿ ಸಂಚರಿಸುತ್ತಿರುವ ವೋಲ್ವೋ ಬಸ್‌ಗಳು ನಾಲ್ಕು ಸಾರಿಗೆ ನಿಗಮಗಳಲ್ಲಿ ಯಾವುದು ಇರುವುದಿಲ್ಲ.</td></tr>
</table>

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| ಈ. | ತುರ್ತಾಗಿ ಹಳೆಯ ವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸ್ ವ್ಯವಸ್ಥೆ ಮಾಡಲು ಎಷ್ಟು ವೋಲ್ವೋ ಬಸ್ಸುಗಳ ಅವಶ್ಯಕತೆ ಇದೆ; ಇದರ ಬಗ್ಗೆ ಸರ್ಕಾರ ಮತ್ತು ಸಾರಿಗೆ ಸಂಸ್ಥೆ ತೆಗೆದುಕೊಂಡಿರುವ ಕ್ರಮಗಳೇನು; | **ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಅವಧಿ ಮೀರಿರುವ/ ಹಳೆಯ ವೋಲ್ವೋ ವಾಹನಗಳ ಕಾರ್ಯಾಚರಣೆ ಯಾವುದೂ ಇರುವುದಿಲ್ಲ.**<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-**<br>ನಿಗಮದಲ್ಲಿ 2025-26 ಸಾಲಿಗೆ 15 ಹೊಸ ವೋಲ್ವೋ ಫ್ಲೈ-ಬಸ್ ಸೇವೆಯ ಅನುಸೂಚಿಗಳನ್ನು ಪ್ರಾರಂಭಿಸಲು ಯೋಜಿಸಿದ್ದು, ಲಭ್ಯತೆಗನುಗುಣವಾಗಿ ಮುಂದಿನ ದಿನಗಳಲ್ಲಿ ಒದಗಿಸಲು ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-**<br>ಪ್ರಸ್ತುತ ಸಂಸ್ಥೆಯಲ್ಲಿ ಹೊಸ ಮಾರ್ಗಗಳಿಗೆ ವೋಲ್ವೋ ವಾಹನಗಳ ಅವಶ್ಯಕತೆ ಇರುವುದಿಲ್ಲ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**<br>ಸಂಸ್ಥೆಯಲ್ಲಿ ವೋಲ್ವೋ ವಾಹನ ಕಾರ್ಯಾಚರಣೆಗಾಗಿ ಯಾವುದೇ ಹೊಸ ಮಾರ್ಗಗಳ ಪ್ರಸ್ತಾವನೆ ಇರುವುದಿಲ್ಲ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-**<br>ನಿಗಮದಲ್ಲಿ ಹೊಸ ಮಾರ್ಗಗಳ ಕಾರ್ಯಾಚರಣೆಗಾಗಿ 10 ವೋಲ್ವೋ ವಾಹನಗಳ ಅವಶ್ಯಕತೆ ಇರುತ್ತದೆ.<br><br>ನಿಗಮಕ್ಕೆ 2025-26ನೇ ಸಾಲಿನಲ್ಲಿ 750 ವಿವಿಧ ಮಾದರಿಯ ಹೊಸ ಬಸ್ಸುಗಳನ್ನು ಖರೀದಿಸಲು ಯೋಜನೆ ರೂಪಿಸಲಾಗಿದ್ದು, ಸದರಿ ಬಸ್‌ಗಳಿಗೆ ಅಂದಾಜು ರೂ.350.00 ಕೋಟಿಗಳ ಅವಶ್ಯಕತೆವಿದ್ದು, ಸದರಿ ಅನುದಾನವನ್ನು ಒದಗಿಸುವಂತೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕೋರಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br><br>ಮುಂದುವರೆದು, ಅನುದಾನ ದೊರೆತ ನಂತರ ಬೇಡಿಕೆಗನುಗುಣವಾಗಿ ಬಸ್‌ಗಳನ್ನು ಒದಗಿಸಲು ಆದ್ಯತೆ ಮೇರೆಗೆ ಕ್ರಮವಹಿಸಲಾಗುವುದು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಉ. | ಹಳೆಯ ವಾಹನ ಗುಜರಿಗೆ ಹಾಕುವ ನೀತಿಯನ್ನು 2023 ಏಪ್ರಿಲ್ 1 ರಂದು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದು, ಅದರ ಪ್ರಕಾರ ಸಾರಿಗೆ ಇಲಾಖೆಯ (ಬಸ್ಸುಗಳನ್ನು ಒಳಗೊಂಡಂತೆ) ಎಷ್ಟು ವಾಹನಗಳನ್ನು ಗುಜರಿಗೆ ಹಾಕಲಾಗಿದೆ ಹಾಗೂ ಇನ್ನು ಎಷ್ಟು ವಾಹನಗಳನ್ನು ಗುಜರಿಗೆ ಹಾಕಲಾಗುವುದು? | ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ, ಇವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: GSR 653 (E), ದಿನಾಂಕ:23-09-2021 ಮತ್ತು GSR 695 (E), ದಿನಾಂಕ:13-09-2022 ರನ್ವಯ, ಕರ್ನಾಟಕ ರಾಜ್ಯದಲ್ಲಿಯೂ ಸಹ ಹಳೆಯ ವಾಹನಗಳ ಸ್ಕ್ರ್ಯಾಪಿಂಗ್ ಪಾಲಿಸಿಯನ್ನು [Registered Vehicle Scrapping Facility (RVSF)] ಅಧಿಸೂಚನೆ ಸಂಖ್ಯೆ: ಟಿಡಿ 191 ಟಿಡಿಒ 2022, ದಿನಾಂಕ:31-12-2022ರಲ್ಲಿ ಜಾರಿಗೆ ತರಲಾಗಿದೆ. ಸದರಿ ಪಾಲಿಸಿಯನ್ವಯ ರಾಜ್ಯದಲ್ಲಿ ಅರ್ಹ ಹೂಡಿಕೆದಾರರು / ಸಂಸ್ಥೆ / ಏಜೆನ್ಸಿಗಳನ್ನು Registered Vehicle Scrapping Facility (RVSF) ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ ಎರಡು Registered Vehicle Scrapping Facility (RVSF) ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.<br><br>ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: GSR 29 (E), ದಿನಾಂಕ:16-01-2023 ರನ್ವಯ ಹದಿನೈದು (15) ವರ್ಷ ಮೀರಿದ ಸರ್ಕಾರದ ಇಲಾಖೆ ಮತ್ತು ಅದರ ಅಂಗ ಸಂಸ್ಥೆಯ ವಾಹನಗಳನ್ನು ಸ್ಕ್ರ್ಯಾಪ್ ಮಾಡಲು ಆದೇಶ ಹೊರಡಿಸಲಾದ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಟಿಡಿ 191 ಟಿಡಿಒ 2022, ದಿನಾಂಕ:26-09-2023 ರಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಇಲಾಖೆ / ರಾಜ್ಯ ಸರ್ಕಾರದ ಇಲಾಖೆ / ಸರ್ಕಾರದ ಅಧೀನ ಸಂಸ್ಥೆಗಳು / ಸ್ಥಳೀಯ ಸಂಸ್ಥೆಗಳು / ನಿಗಮ/ ಮಂಡಳಿಗಳಲ್ಲಿರುವ 5,000 ವಾಹನಗಳನ್ನು ಆದ್ಯತೆ ಮತ್ತು ಉಪಯೋಗದ ಆಧಾರದ ಮೇಲೆ ಹಂತಹಂತವಾಗಿ ನಾಶಪಡಿಸಲು ಅನುಮೋದನೆ ನೀಡಿ, ಮೊದಲಿಗೆ ಅತೀ ಹೆಚ್ಚು ವರ್ಷಗಳನ್ನು ಪೂರೈಸಿರುವ ವಾಹನಗಳನ್ನು ನಾಶಪಡಿಸಲು ಆದ್ಯತೆ ನೀಡತಕ್ಕದ್ದು ಎಂದು ಆದೇಶಿಸಲಾಗಿದೆ.<br><br>ಮುಂದುವರೆದು, ರಾಜ್ಯ ಸರ್ಕಾರವು ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆ / ನಿಗಮ / ಮಂಡಳಿ / ನಗರಸಭೆ / ಸರ್ಕಾರದ ಇತರೆ ಅಧೀನ ಸಂಸ್ಥೆಗಳಿಗೆ ಸೇರಿದ ನೋಂದಣಿಯಾಗಿ ಹದಿನೈದು (15) ವರ್ಷ ಮೀರಿದ ವಾಹನಗಳನ್ನು ಕಡ್ಡಾಯವಾಗಿ ರಾಜ್ಯದಲ್ಲಿ ಸ್ಥಾಪಿತವಾಗಿರುವ Registered Vehicle Scrapping Facility (RVSF) ಗಳಲ್ಲಿಯೇ ಸ್ಕ್ರ್ಯಾಪ್ ಮಾಡಲು ಆದೇಶ ಸಂಖ್ಯೆ: ಟಿಡಿ 97 ಟಿಡಿಒ 2023, ದಿನಾಂಕ:12-09-2025 ರಲ್ಲಿ ಅನುಮೋದನೆ ನೀಡಲಾಗಿದೆ.<br><br>ಎನ್.ಐ.ಸಿ.ರವರು ಒದಗಿಸಿರುವ ಮಾಹಿತಿಯ ಪ್ರಕಾರ ದಿನಾಂಕ:04-12-2025ರ ಅಂತ್ಯಕ್ಕೆ ಒಟ್ಟು 18,552 ಹದಿನೈದು (15) ವರ್ಷಗಳು ಮೀರಿದ (ಸಾರಿಗೆ ಸಂಸ್ಥೆಗಳ ಬಸ್ಸುಗಳನ್ನು ಹೊರತುಪಡಿಸಿ) ಸರ್ಕಾರಿ ವಾಹನಗಳ ನೋಂದಣಿಯನ್ನು ಕೇಂದ್ರ ಸರ್ಕಾರವು ವಾಹನ್ ಪೋರ್ಟಲಿನಲ್ಲಿ ರದ್ದುಪಡಿಸಲಾಗಿದೆ. ಸದರಿ 18,552 ವಾಹನಗಳ ಪೈಕಿ Registered Vehicle Scrapping Facility (RVSF) ನಲ್ಲಿ ಒಟ್ಟು 1,493 ವಾಹನಗಳನ್ನು ಸ್ಕ್ರ್ಯಾಪ್ ಮಾಡಲಾಗಿದೆ ಮತ್ತು 17,059 ವಾಹನಗಳನ್ನು ಸ್ಕ್ರ್ಯಾಪ್ ಮಾಡುವುದು ಬಾಕಿ ಇರುತ್ತದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಮುಂದುವರೆದು, ನಾಲ್ಕೂ ಸಾರಿಗೆ ನಿಗಮ / ಸಂಸ್ಥೆಗಳಲ್ಲಿ ಏಪ್ರಿಲ್-2023 ರಿಂದ ಇಲ್ಲಿಯವರೆಗೆ ನಿಷ್ಕ್ರೀಯಗೊಂಡ ವಾಹನಗಳು ಮತ್ತು ನಿಷ್ಕ್ರೀಯಗೊಳಿಸಲು ಬಾಕಿ ಇರುವ ವಾಹನಗಳ ವಿವರ ಈ ಕೆಳಕಂಡಂತಿವೆ:- |

| ಕ್ರ.ಸಂ | ನಿಗಮ/ಸಂಸ್ಥೆ | ನಿಷ್ಕ್ರೀಯಗೊಂಡ ವಾಹನಗಳು | ನಿಷ್ಕ್ರೀಯಗೊಳಿಸಲು ಬಾಕಿ ಇರುವ ವಾಹನಗಳು |
|---|---|---|---|
| 1 | ಕ.ರಾ.ರ.ಸಾ.ನಿಗಮ. | 768 | 284 |
| 2 | ಬೆಂ.ಮ.ಸಾ.ಸಂಸ್ಥೆ. | 1509 | 47 |
| 3 | ವಾ.ಕ.ರ.ಸಾ.ಸಂಸ್ಥೆ | 474 | 208 |
| 4 | ಕ.ಕ.ರ.ಸಾ.ನಿಗಮ. | 461 | 40 |
| ಒಟ್ಟು | | **3212** | 579 |

ಸಂಖ್ಯೆ: ಟಿಡಿ 251 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

# ಕರ್ನಾಟಕ ರಾಜ್ಯ ಸಾರಿಗೆ ನಿಗಮ: ಕೇಂದ್ರ ಕಛೇರಿ: ಯಾಂತ್ರಿಕ ಶಾಖೆ: ಬೆಂಗಳೂರು

ಸಂಖ್ಯೆ/ಕರಾಸಾ/ಕೇಕ/ಯಾಂ./ಸ.ಕಾ.ಅ./೯೧೦/2023-24 ದಿನಾಂಕ: ೭3 -09-2023

## ಸುತ್ತೋಲೆ ಸಂಖ್ಯೆ:೮೧೦: 2023

**ವಿಷಯ: ವಾಹನಗಳನ್ನು ಮತ್ತು ಪ್ರಮುಖ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸುವ ಕಿ.ಮೀ.ಗಳನ್ನು ಪರಿಷ್ಕರಿಸಿ, ನಿಗಧಿಪಡಿಸಿರುವ ಬಗ್ಗೆ.**

**ಉಲ್ಲೇಖ:** 1. ಸುತ್ತೋಲೆ ಸಂಖ್ಯೆ: 235 ದಿನಾಂಕ: 17.02.1988
2. ಸುತ್ತೋಲೆ ಸಂಖ್ಯೆ: 678 : ದಿನಾಂಕ: 18.03.2010
3. ಸುತ್ತೋಲೆ ಸಂಖ್ಯೆ: 708 : ದಿನಾಂಕ: 19.07.2012
4. ಸುತ್ತೋಲೆ ಸಂಖ್ಯೆ: 716 : ದಿನಾಂಕ: 05.07.2013
5. ಸುತ್ತೋಲೆ ಸಂಖ್ಯೆ: 740 : ದಿನಾಂಕ: 22.07.2014
6. ಸುತ್ತೋಲೆ ಸಂಖ್ಯೆ: 774 : ದಿನಾಂಕ: 25.09.2017
7. ಕೇಂ.ಸರ್ಕಾರದ ಅಧಿಸೂಚನೆ ಸಂ:GSR.29(E) Dated:16.01.2023.
8. ದಿನಾಂಕ 24.07.2023 ರಂದು ಕೇಂ.ಕಛೇರಿಯಲ್ಲಿ ಸುತ್ತೋಲೆ ಸಂಖ್ಯೆ-235/1988 ಅನ್ನು ಪರಿಷ್ಕರಿಸುವ ಕುರಿತಾದ ಸಭೆಯ ನಡಾವಳಿ.
9. **ಮಂಡಳಿ ಠರಾವು ಸಂಖ್ಯೆ:10377 ದಿನಾಂಕ: 14.09.2023.**

******

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 15 ವಿಭಾಗಗಳ ಮೂಲಕ 83 ಘಟಕಗಳಿಂದ 7492 ಅನುಸೂಚಿಗಳನ್ನು ಲೇಲ್ಯಾಂಡ್, ಟಾಟಾ ಮತ್ತು ಐಷರ್ ತಯಾರಿಕೆಯ ಸಾಮಾನ್ಯ, ರಾಜಹಂಸ, ನಾನ್ ಎ.ಸಿ.ಸ್ಲೀಪರ್ ವಾಹನಗಳಿಂದ ಮತ್ತು ಪ್ರತಿಷ್ಠಿತ ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ, ಮರ್ಸಿಡೀಸ್ ಬೆಂಜ್ ಮತ್ತು ಕರೋನಾ ತಯಾರಿಕೆಯ ಸೀಟರ್ ಮತ್ತು ಸ್ಲೀಪರ್ ವಾಹನಗಳು ಸೇರಿ ಒಟ್ಟು 8132 ವಾಹನಗಳ ಬಲದಿಂದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ/ಮಿತವ್ಯಯ ಮತ್ತು ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸುತ್ತಿದೆ.

ನಿಗಮದ ಮೇಲ್ಕಂಡ ಸುತ್ತೋಲೆಗಳಲ್ಲಿ ಸದರಿ ವಾಹನಗಳು ಮತ್ತು ಅಸೆಂಬ್ಲಿಗಳು ಕಾರ್ಯಚರಿಸಿದ ಕಿ.ಮೀ.ಗಳ ಆಧಾರದ ಮೇಲೆ ಮತ್ತು ಭೌತಿಕ ಹಾಗೂ ತಾಂತ್ರಿಕ ಸ್ಥಿತಿಯ ಸಾಮರ್ಥ್ಯವನ್ನು ಪರಿಗಣಿಸಿ, ವಾಹನಗಳನ್ನು ಮತ್ತು ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸಲಾಗುವ ಕಿ.ಮೀ.ಗಳನ್ನು ಅಗಾಗ್ಗೆ ಪರಿಷ್ಕರಿಸಿ/ ವೃದ್ಧಿಸಲಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನವೀನ ಮಾದರಿ/ ತಾಂತ್ರಿಕತೆಯ ವಾಹನಗಳು ಸೇರ್ಪಡೆ ಆಗುತ್ತಿದ್ದು, ಅದಕ್ಕೆ ಸಮಾನಾಂತರವಾಗಿ ಅತ್ಯುತ್ತಮ ಗುಣಮಟ್ಟದಲ್ಲಿ ಕವಚ ನಿರ್ಮಾಣ/ ಹೆ.ಕವಚ ದುರಸ್ಥಿ ಮತ್ತು <u>ಕವಚ ಪುನಶ್ಚೇತನ</u> **<u>(Refurbishing)</u>** ಕಾರ್ಯವನ್ನು ಮಾಡುತ್ತಿರುವುದಲ್ಲದೇ, ಗುಣಮಟ್ಟದ ಬಿಡಿಭಾಗಗಳು ಆಯಿಲ್, ಕೂಲೆಂಟ್, ಗ್ರೀಸ್ ಸರಬರಾಜು ಮಾಡುತ್ತಿದ್ದು, ವಾಹನಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಹಾಗೂ ರಸ್ತೆಗಳ ಗುಣಮಟ್ಟವು ಸಹ ಸುಧಾರಣೆಗೊಂಡಿರುವುದರಿಂದ ವಾಹನಗಳು ಮೇಲ್ಕಂಡ ಸುತ್ತೋಲೆಗಳಂತೆ ನಿಗಧಿತ ನಿರುಪಯುಕ್ತ ಕಿ.ಮೀ. ಕ್ರಮಿಸಿದ ನಂತರವು ಕವಚ ಮತ್ತು ಅಸೆಂಬ್ಲಿಗಳು ಸುಸ್ಥಿತಿಯಲ್ಲಿ ಇರುತ್ತದೆ.

ಸಾಮಾನ್ಯ ವಾಹನಗಳನ್ನು ನಿರುಪಯುಕ್ತಗೊಳಿಸಲು ನಿಗಧಿಪಡಿಸಿರುವ 9.00 ಲಕ್ಷ ಕಿ.ಮೀ. ಕ್ರಮಿಸಿರುವ 4327 ವಾಹನಗಳು (57 %) ಮತ್ತು ಪ್ರತಿಷ್ಠಿತ ವೋಲ್ವೋ ವಾಹನಗಳನ್ನು ನಿರುಪಯುಕ್ತಗೊಳಿಸಲು ನಿಗದಿಪಡಿಸಿರುವ 13.00 ಲಕ್ಷ ಕಿ.ಮೀಟರ್ ಕ್ರಮಿಸಿರುವ 174 (46%) ವಾಹನಗಳು ಇದ್ದು, ಜುಲೈ 2023 ರಂತೆ 7550 ಸಾಮಾನ್ಯ ವಾಹನಗಳು ಸರಾಸರಿ 10.72 ಲಕ್ಷ ಕಿ.ಮೀ. ಮತ್ತು 503 ಹವಾನಿಯಂತ್ರಿತ ವಾಹನಗಳು ಸರಾಸರಿ 11.49 ಲಕ್ಷ ಕಿ.ಮೀ. ಕ್ರಮಿಸಿ, ಸುಸ್ಥಿತಿಯಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಪ್ರಯುಕ್ತ ವಾಹನಗಳ ಮತ್ತು ಅಸೆಂಬ್ಲಿಗಳ ಜೀವಮಾನ ಕಿ.ಮೀ.ಅನ್ನು ಪರಿಷ್ಕರಿಸಿ, ವೃದ್ಧಿಸುವುದು ನಿಗಮದ ಆರ್ಥಿಕ ಸ್ಥಿತಿಯ ಹಿತದೃಷ್ಟಿಯಿಂದ ಸಹ ಅತಿ ಅವಶ್ಯವಿರುತ್ತದೆ.

<u>ಪ್ರಸ್ತುತ ವಾಹನಗಳನ್ನು ಮತ್ತು ಪ್ರಮುಖ ಅಸೆಂಬ್ಲಿಗಳ ನಿರುಪಯುಕ್ತ ಕಿ.ಮೀ. ವೃದ್ಧಿಸಲು ಪ್ರಮುಖ ಕಾರಣಗಳು ಈ ಕೆಳಕಂಡಂತಿದೆ.</u>

a) ಕಳೆದ 2-3 ವರ್ಷಗಳಿಂದ ನಿಗಮಕ್ಕೆ ನಿಗದಿತ ಪ್ರಮಾಣದ ಹೊಸ ವಾಹನಗಳು ಸೇರ್ಪಡೆಯಾಗಿರುವುದಿಲ್ಲ.

b) ಪ್ರಸ್ತುತ ಸುತ್ತೋಲೆಗಳಂತೆ, ವಾಹನಗಳು ನಿಗದಿತ ಕಿ.ಮೀಟರ್ ಕ್ರಮಿಸಿದ್ದರೂ ಸಹ ವಾಹನಗಳ ಕೊರತೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳನ್ನು ನಿರುಪಯುಕ್ತಗೊಳಿಸಿರುವುದಿಲ್ಲ.

c) ಆಧುನಿಕ ನಿರ್ವಹಣಾ ಕ್ರಮಗಳಿಂದ ವಾಹನಗಳ ತಾಂತ್ರಿಕ ಸ್ಥಿತಿ ಹಾಗೂ ಕವಚ ನಿರ್ಮಾಣದ ಗುಣಮಟ್ಟವು ಉತ್ತಮಗೊಂಡಿರುತ್ತದೆ.

d) ನೂತನ ಯೋಜನೆಯಾದ **<u>ಕವಚ ಪುನಶ್ಚೇತನ(Refurbishing)</u>** ರಡಿ 10.00 ಲಕ್ಷ ಕಿ.ಮೀ.ಗಿಂತ ಹೆಚ್ಚು ಕ್ರಮಿಸಿರುವ ಹಾಗೂ 10 ವರ್ಷ ವಯೋಮಾನ ಪೂರೈಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಕವಚ ದುಸ್ಥಿತಿಯಲ್ಲಿರುವ ಸಾಮಾನ್ಯ ವಾಹನಗಳಿಗೆ ಕವಚ ಪುನಶ್ಚೇತನ (Refurbishing) ಕಾರ್ಯವನ್ನು ನಿರ್ವಹಿಸುತ್ತಿದ್ದು, ಇದರಿಂದ ವಾಹನಗಳ ಜೀವಿತಾವಧಿ ವಿಸ್ತರಣೆಗೊಂಡಿರುತ್ತದೆ.

e) ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: G.S.R. 29 (ಇ) ದಿನಾಂಕ 16.01.2023 ರ ಆದೇಶದಂತೆ ದಿನಾಂಕ 01.04.2023 ರಿಂದ ಜಾರಿಗೆ ಬರುವಂತೆ 15 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯೋಮಾನದ ಸರ್ಕಾರಿ ಸ್ವಾಮ್ಯದ ವಾಹನಗಳ ನೋಂದಣಿ ಪತ್ರಗಳು ಸ್ವಯಂ ಆಗಿ ರದ್ದತಿಯಾಗುತ್ತಿರುತ್ತದೆ. ವಾಹನಗಳ ಉಪಯುಕ್ತತೆ ಒಂದು ದಿನಕ್ಕೆ ಸರಾಸರಿ 368 ಕಿ.ಮೀ.ಇದ್ದು 15 ವರ್ಷಕ್ಕೆ ಸುಮಾರು 15.00 ಲಕ್ಷ ಕಿ.ಮೀ.ಗೂ ಹೆಚ್ಚು ಕ್ರಮಿಸುವುದರಿಂದ ವಾಹನಗಳ ನಿರುಪಯುಕ್ತ ಕಿ.ಮೀ.ನ್ನು ವೃದ್ಧಿಸುವುದು ಅಗತ್ಯವಿರುತ್ತದೆ.

f) ಪ್ರಸ್ತುತ ರಸ್ತೆಗಳ ಗುಣಮಟ್ಟವು ಸಹ ಸುಧಾರಣೆಗೊಂಡಿರುವುದರಿಂದ ವಾಹನಗಳ ಕವಚ ಮತ್ತು ತಾಂತ್ರಿಕ ದೋಷಗಳು ಕಡಿಮೆಯಾಗಿರುತ್ತದೆ.

g) ನಿಗಮದಲ್ಲಿ ಒಟ್ಟು 7540 <u>ಸಾಮಾನ್ಯ ವಾಹನಗಳಿದ್ದು</u>, ನಿರುಪಯುಕ್ತಗೊಳಿಸಲು ನಿಗದಿಪಡಿಸಿರುವ 9.00 ಲಕ್ಷ ಕಿ.ಮೀ. ಕ್ರಮಿಸಿರುವ 4327 (57%) ಮತ್ತು 14.00 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ 968 ಟಾಟಾ, ಲೇಲ್ಯಾಂಡ್ ಮತ್ತು ಐಷರ್ ತಯಾರಿಕೆ ಸಾಮಾನ್ಯ ವಾಹನಗಳು ಕಾರ್ಯಾಚರಣೆಯಲ್ಲಿದ್ದು, ಸದರಿ ವಾಹನಗಳು ಸುಸ್ಥಿತಿಯಲ್ಲಿ ಕಾರ್ಯಚರಣೆ ಮಾಡುತ್ತಿರುವುದರಿಂದ, ಸಾಮಾನ್ಯ ವಾಹನಗಳ ಮತ್ತು ಪ್ರಮುಖ ಜೋಡಣೆಗಳ ನಿರುಪಯುಕ್ತ ಕಿ.ಮೀ.ಅನ್ನು ವೃದ್ಧಿಸಲಾಗಿರುತ್ತದೆ.

h) ನಿಗಮದಲ್ಲಿ ಒಟ್ಟು 380 <u>ವೋಲ್ವೋ ವಾಹನಗಳಿದ್ದು</u>, ನಿರುಪಯುಕ್ತಗೊಳಿಸಲು ನಿಗದಿಪಡಿಸಿರುವ 13.00 ಲಕ್ಷ ಕಿ.ಮೀಟರ್ ಕ್ರಮಿಸಿರುವ 174 (46 %) ವಾಹನಗಳು ಮತ್ತು 14.00 ಲಕ್ಷಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ 169 ವೋಲ್ವೋ ವಾಹನಗಳಿದ್ದು, ಸುಸ್ಥಿತಿಯಲ್ಲಿ ಕಾರ್ಯಚರಣೆ ಮಾಡುತ್ತಿರುವುದರಿಂದ ವೋಲ್ವೋ ವಾಹನಗಳ ಮತ್ತು ಪ್ರಮುಖ ಜೋಡಣೆಗಳ ನಿರುಪಯುಕ್ತ ಕಿ.ಮೀ. ಅನ್ನು ವೃದ್ಧಿಸಲಾಗಿರುತ್ತದೆ.

i) ನಿಗಮದಲ್ಲಿ ಈಗಾಗಲೇ ನವೀನ ತಾಂತ್ರಿಕತೆಯ ಹೊಸ ಬಿ.ಎಸ್-4 ಮತ್ತು ಬಿ.ಎಸ್-6 ಮಾದರಿ ವಾಹನಗಳು ಸೇರ್ಪಡೆಯಾಗಿದೆ. ಈ ವಾಹನಗಳ ಪ್ರಮುಖ ಸಿಸ್ಟಂಗಳು ಸೆನ್ಸಾರ್ ಮಾದರಿಯಾಗಿದ್ದು, ದೋಷ ಕಂಡುಬಂದಲ್ಲಿ ಕ್ಲಸ್ಟರ್ ಬೋರ್ಡ್‌ನಲ್ಲಿ ಡಿಸ್‌ಪ್ಲೇ ಆಗುವುದರಿಂದ, ದೋಷಗಳನ್ನು ಪ್ರಥಮ ಹಂತದಲ್ಲೇ ನಿವಾರಿಸುವುದರಿಂದ, ಅಸೆಂಬ್ಲಿಗಳ ಜೀವಮಾನವು ವೃದ್ಧಿಯಾಗುತ್ತದೆ. ಉತ್ತಮ ಗುಣಮಟ್ಟದ ಬಿಡಿಭಾಗಗಳು ಆಯಿಲ್, ಕೂಲೆಂಟ್, ಗ್ರೀಸ್ ಸರಬರಾಜು ಮಾಡುತ್ತಿದ್ದು, ರಸ್ತೆಗಳ ಗುಣಮಟ್ಟವು ಸಹ ಉತ್ತಮವಾಗಿರುತ್ತದೆ. ಇದಲ್ಲದೇ ವಾಹನಗಳನ್ನು ಕಾಲಕಾಲಕ್ಕೆ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುತ್ತಿದ್ದು, ಅಸೆಂಬ್ಲಿಗಳ ಪುನಶ್ಚೇತನ ಕಾರ್ಯವನ್ನು ಸಹ ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸುತ್ತಿದ್ದು, ಇದರಿಂದ ಅಸೆಂಬ್ಲಿಗಳ ಜೀವಮಾನವು ಹೆಚ್ಚಾಗುತ್ತಿರುವುದರಿಂದ ಪ್ರಮುಖ ಅಸೆಂಬ್ಲಿಗಳ ನಿರುಪಯುಕ್ತ ಕಿ.ಮೀ. ಅನ್ನು ವೃದ್ಧಿಸಲಾಗಿರುತ್ತದೆ.

**ವಾಹನಗಳನ್ನು ಮತ್ತು ಪ್ರಮುಖ ಜೋಡಣೆಗಳನ್ನು ನಿರುಪಯುಕ್ತಗೊಳಿಸುವ ಕಿ.ಮೀ.ಗಳನ್ನು ಪರಿಷ್ಕರಿಸಿ, ಹೆಚ್ಚಿಸುವ ಹಾಗೂ ನಿರುಪಯುಕ್ತಗೊಳಿಸಲು ಅಧಿಕಾರ ಪ್ರತ್ಯಾಯೋಜನೆ ನೀಡುವ ಪ್ರಸ್ತಾವನೆಗೆ ಮಂಡಳಿ <u>ಠರಾವು ಸಂಖ್ಯೆ 10377 ದಿನಾಂಕ 14/09/2023 ರಲ್ಲಿ ಅನುಮೋದನೆ ನೀಡಲಾಗಿದೆ.</u>**

1) ವಿವಿಧ ತಯಾರಿಕೆಯ/ಮಾದರಿಯ ವಾಹನಗಳನ್ನು ನಿರುಪಯುಕ್ತಗೊಳಸಲು ನಿಗಧಿಪಡಿಸಿರುವ **ಕಿ.ಮೀಟರ್‌ಗಳು ಈ ಕೆಳಕಂಡಂತಿದೆ.**

| ಕ್ರ.ಸಂ | ವಾಹನ ತಯಾರಿಕೆ/ ಮಾದರಿ | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) | ಪರಿಷ್ಕರಿಸಿ, ನಿಗಧಿಪಡಿಸಿರುವ ಕಿ.ಮೀ. /ವರ್ಷ |
|---|---|---|---|
| 1 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಕರ್ನಾಟಕ ಸಾರಿಗೆ, ರಾಜಹಂಸ / ವೈಭವ, ನಾನ್ ಎ.ಸಿ. ಸ್ಲೀಪರ್ ವಾಹನಗಳು (ಮಿಡಿ, ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ) | 9.00 | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 2 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು.(ಕಾರು/ಜೀಪು ಹೊರತುಪಡಿಸಿ) | 9.00 | 9.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 3 | ವೋಲ್ವೋ ನಗರ ಸಾರಿಗೆ ವಾಹನಗಳು | 13.00 | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 4 | ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು | 13.00 | 15.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 5 | ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು | 13.00 | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 6 | ಸ್ಕ್ಯಾನಿಯ ಸೀಟರ್ ವಾಹನಗಳು | ---- | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 7 | ಕರೋನಾ ಎ.ಸಿ. ಮತ್ತು ನಾನ್ ಎ.ಸಿ. ಸ್ಲೀಪರ್ ವಾಹನಗಳು | 11.00 | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |

**3) ಲೇಲ್ಯಾಂಡ್, ಟಾಟಾ, ಐಷರ್, ಕರೋನಾ ಮತ್ತು ಇತರೆ ತಯಾರಿಕೆ ವಾಹನಗಳ ಪ್ರಮುಖ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಸಲು ನಿಗಧಿಪಡಿಸಿರುವ ಕಿ.ಮೀಟರ್‌ಗಳು ಈ ಕೆಳಕಂಡಂತಿದೆ.**

| ಕ್ರ. ಸಂ | ವಿವರಗಳು | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) ಸುತ್ತೋಲೆ:235/1988 | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) ಸುತ್ತೋಲೆ: 678/2010 | ಪರಿಷ್ಕರಿಸಿ, ನಿಗಧಿಪಡಿಸಿರುವ ಕಿ.ಮೀ. (ಲಕ್ಷಗಳಲ್ಲಿ) |
|---|---|---|---|---|
| 1 | ಇಂಜಿನ್ | Should have undergone reconditioning 6 times. | Engine Should have been covered 6.50 lakh Kms & should have been reconditioned before declaring it as scrapped. OR The OE engine should have been completed more than 8 Lakh Kms without any reconditioning before declaring it as scrapped. | 8.00 ಲಕ್ಷ ಕಿ.ಮೀ. (ರಿ-ಕಂಡೀಷನ್ ಆಗಿರಬೇಕು) ಅಥವಾ ಒರಿಜಿನಲ್ ಇಂಜಿನ್ 9.00 ಲಕ್ಷ ಕಿ.ಮೀ. ಕ್ರಮಿಸಿರಬೇಕು. |
| 2 | ಎಫ್.ಐ.ಪಿ. | 5.00 | - | 6.00 |
| 3 | ಸಿ.ಆರ್.ಡಿ.ಐ. ಹೆಚ್.ಪಿ.ಪಂಪ್ | --- | - | 7.00 |
| 4 | ಏರ್‌ಕಂಪ್ರೆಸರ್ | 3.50 | - | 6.00 |
| 5 | ರೇಡಿಯೇಟರ್ | 3.50 | - | 6.00 |

| | | | | |
|---|---|---|---|---|
| 6 | ಇಂಟರ್‌ಕೂಲರ್ | --- | – | 6.00 |
| 7 | ಟರ್ಬೋಚಾರ್ಜರ್ | ---- | – | 8.00 |
| 8 | ಇಂಜಿನ್ ಇ.ಸಿ.ಯು | ---- | – | 6.00 |
| 9 | ಈಟ್ಸ್ ಸಿಸ್ಟಂ (Exhaust after treatment sys.) | ---- | – | 6.00 |
| 10 | ಗೇರ್ ಬಾಕ್ಸ್ | 5.00 | – | 8.00 |
| 11 | ರಿಟಾರ್ಡರ್ | – | – | 8.00 |
| 12 | ಸೆಲ್ಫ್ ಸ್ಟಾಟರ್ | 4.50 | – | 6.00 |
| 13 | ಆಲ್ಟರ್‌ನೇಟರ್ | 4.50 | – | 8.00 |
| 14 | ರಿಯರ್ ಆಕ್ಸ್‌ಲ್ ಅಸೆಂಬ್ಲಿ | 5.00 | – | 8.00 |
| 15 | ಎಫ್.ಡಿ.ಎಸ್.ಎಸ್. ಮತ್ತು ಎಫ್.ಡಿ.ಎ.ಎಸ್. | ---- | – | 6.00 |

4) ಪ್ರತಿಷ್ಠಿತ ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ತಯಾರಿಕೆ ವಾಹನಗಳ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸಲು ನಿಗಧಿಪಡಿಸಿರುವ ಕಿ.ಮೀಟರ್‌ಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಿವರಗಳು | ನಿಗದಿಪಡಿಸಲಾಗಿದ್ದ ಕಿ.ಮೀ. (ಲಕ್ಷಗಳಲ್ಲಿ) ಸುತ್ತೋಲೆ:708/2012 | ಪರಿಷ್ಕರಿಸಿ ನಿಗಧಿಪಡಿಸಿರುವಕಿ.ಮೀ. (ಲಕ್ಷಗಳಲ್ಲಿ) |
|---|---|---|---|
| 1 | ಇಂಜಿನ್ | 10.00 | 11.00 |
| 2 | ಸಿ.ಆರ್.ಡಿ.ಐ. ಹೆಚ್.ಪಿ.ಪಂಪ್/ ಯುನಿಟ್ ಪಂಪ್ | 10.00 | 11.00 |
| 3 | ಏರ್‌ಕಂಪ್ರೇಸರ್ | 10.00 | 11.00 |
| 4 | ಎ.ಸಿ. ಏರ್‌ಕಂಪ್ರೇಸರ್ | --- | 11.00 |
| 5 | ರೇಡಿಯೇಟರ್ | 10.00 | 11.00 |
| 6 | ಇಂಟರ್‌ಕೂಲರ್ | ---- | 11.00 |
| 7 | ಟರ್ಬೋಚಾರ್ಜರ್ | ---- | 9.00 |
| 8 | ಇಂಜಿನ್ ಇ.ಸಿ.ಯು | ----- | 8.00 |
| 9 | ಈಟ್ಸ್ ಸಿಸ್ಟಂ (Exhaust after treatment sys.) | ---- | 8.00 |
| 10 | ಗೇರ್ ಬಾಕ್ಸ್ | 10.00 | 11.00 |
| 11 | ರಿಟಾರ್ಡರ್ | 10.00 | 11.00 |
| 12 | ಸೆಲ್ಫ್ ಸ್ಟಾಟರ್ ಮತ್ತು ಆಲ್ಟರ್‌ನೇಟರ್ | 8.00 | 9.00 |
| 13 | ರಿಯರ್ ಆಕ್ಸ್‌ಲ್ ಆಸೆಂಬ್ಲಿ | 10.00 | 11.00 |
| 14 | ಏರ್‌ಕಂಡೀಷನರ್ ಸಿಸ್ಟಂ/ಜೋಡಣೆಗಳು | 10.00 | 11.00 |
| 15 | ಎಫ್.ಡಿ.ಎಸ್.ಎಸ್. ಮತ್ತು ಎಫ್.ಡಿ.ಎ.ಎಸ್. | ---- | 6.00 |

ಮೇಲಿನಂತೆ, ವಿವಿಧ ತಯಾರಿಕ/ಮಾದರಿ ವಾಹನಗಳನ್ನು ಹಾಗೂ ಪ್ರಮುಖ ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸಲು ಕಿ.ಮೀಟರ್‌ಗಳನ್ನು ನಿಗಧಿಪಡಿಸಲಾಗಿರುತ್ತದೆ.

<u>ಅನುಸರಿಸಬೇಕಾದ ಕ್ರಮಗಳು:</u>

1. ಒಂದು ವೇಳೆ ವಾಹನಗಳ ಕವಚವನ್ನು ಪುನಶ್ಚೇತನಗೊಳಿಸಿದಲ್ಲಿ (Refurbishing) ತದನಂತರ ಎಲ್ಲಾ ಸಾಮಾನ್ಯ ವಾಹನಗಳು, ರಾಜಹಂಸ, ನಾನ್ ಎ.ಸಿ.ಸ್ಲೀಪರ್ ಮತ್ತು ಪ್ರತಿಷ್ಠಿತ ಹವಾನಿಯಂತ್ರಿತ ವಾಹನಗಳು ಕನಿಷ್ಠ ೩.೦೦ ಲಕ್ಷ ಕಿ.ಮೀ. ಕ್ರಮಿಸಿರಬೇಕು ಅಥಾವ 15 ವರ್ಷ ಪೂರೈಸಿರಬೇಕು.

2. ಪ್ರಮುಖ ಅಸೆಂಬ್ಲಿಗಳು ಮೇಲಿನಂತೆ ನಿಗಧಿತ ಕಿ.ಮೀ.ಗಳನ್ನು ಕ್ರಮಿಸಿದ. ನಂತರ ಸುಸ್ಥಿತಿಯಲ್ಲಿದ್ದಲ್ಲಿ ಉಪಯೋಗಿಸುವುದು. ಈ ಜೋಡಣೆಗಳು ನಿಗಧಿತ ಕಿ.ಮೀ.ಕ್ರಮಿಸಿ, ಅಲ್ಪ ಪ್ರಮಾಣದ ದೋಷವಿದ್ದು ಆರ್ಥಿಕವಾಗಿ ಲಾಭದಾಯಕವಾಗಿದ್ದಲ್ಲಿ ಅವುಗಳನ್ನು ದುರಸ್ಥಿಪಡಿಸಿ, ಬಳಸಿಕೊಳ್ಳುವುದು. ಈ ಬಗ್ಗೆ ಅಸೆಂಬ್ಲಿ ಕಾರ್ಡುಗಳಲ್ಲಿ ಸದರಿ ಮಾಹಿತಿಯನ್ನು ತಪ್ಪದೇ ದಾಖಲಿಸತಕ್ಕದ್ದು.

3. ಅನುಪಯುಕ್ತಗೊಳಿಸಿದ ವಾಹನಗಳಿಗೆ ಅನುಪಯುಕ್ತಗೊಳಿಸಿದ ಅಸೆಂಬ್ಲಿಗಳನ್ನು ಅಳವಡಿಸಿ ಪ್ರಾದೇಶಿಕ ಕಾರ್ಯಾಗಾರಗಳಿಗೆ ರದ್ದತಿಗಾಗಿ ತೆರವುಗೊಳಿಸುವುದು. ನಂತರ ಪ್ರಾದೇಶಿಕ ಕಾರ್ಯಾಗಾರದಲ್ಲಿ ರದ್ದತಿ ವಾಹನಗಳನ್ನು ಮತ್ತು ರದ್ದತಿ ಅಸೆಂಬ್ಲಿಗಳನ್ನು ಪರಿಶೀಲಿಸಿ, ಡಬ್ಲೂ-23 ತಯಾರಿಸಿ, ಮುಂದಿನ ಕ್ರಮಕ್ಕಾಗಿ ಕೇಂದ್ರಕಛೇರಿ ಯಾಂತ್ರಿಕ ಶಾಖೆಗೆ ಕಳುಹಿಸುವುದು. ಯಾವುದೇ ನಿರುಪಯುಕ್ತ ವಾಹನಗಳಿಗೆ ಸ್ಕ್ರಾಪ್ ಅಸೆಂಬ್ಲಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ವಾಹನಗಳನ್ನು ಅಸೆಂಬ್ಲಿರಹಿತವಾಗಿ ತೆರವುಗೊಳಿಸುವ ಬಗ್ಗೆ ಕೇಂದ್ರ ಕಛೇರಿಯಿಂದ ವಿಶೇಷ ಅನುಮತಿ ಪಡೆದುಕೊಳ್ಳುವುದು.

4. ಟಾಟಾ, ಲೇಲ್ಯಾಂಡ್, ಕರೋನಾ ತಯಾರಿಕೆಯ ಎಲ್ಲಾ ಮಾದರಿಯ ವಾಹನಗಳ ಅಸೆಂಬ್ಲಿಗಳನ್ನು ರದ್ದುಪಡಿಸುವ ಅಧಿಕಾರದ ಬಗ್ಗೆ ಈ ಹಿಂದೆ ಸುತ್ತೋಲೆ ಸಂಖ್ಯೆ: 235/1988 ರಲ್ಲಿ ತಿಳಿಸಿರುವಂತೆ ಕಾರ್ಯ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಾಗಾರರವರಿಗೆ ಲೇಲ್ಯಾಂಡ್, ಟಾಟಾ ಜೊತೆಗೆ ಐಷರ್ ತಯಾರಿಕೆಯ ಇಂಜಿನ್, ಎಫ್.ಐ.ಪಿ. ಗಳನ್ನು ರದ್ದುಗೊಳಿಸುವ ಅಧಿಕಾರದ ಜೊತೆಗೆ, ಈ ಎಲ್ಲಾ ತಯಾರಿಕೆಗಳ ಏರ್ ಕಂಪ್ರೇಸರ್, ಟರ್ಬೋಚಾರ್ಜರ್, ಸಿ.ಆರ್.ಡಿ.ಐ./ಹೆಚ್.ಪಿ.ಪಂಪ್, ಈಟ್ಸ್ ಸಿಸ್ಟಂ, ರಿಟಾರ್ಡರ್ ಮತ್ತು ಇಂಜಿನ್ ಇ.ಸಿ.ಯು. ಗಳನ್ನು ರದ್ದುಗೊಳಿಸುವ ಅಧಿಕಾರವನ್ನು ನೀಡಲಾಗಿದೆ. (ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ವಾಹನಗಳ ಅಸೆಂಬ್ಲಿಗಳನ್ನು ಹೊರತುಪಡಿಸಿ)

5. ಮುಂದುವರೆದಂತೆ, ಟಾಟಾ, ಲೇಲ್ಯಾಂಡ್, ಐಷರ್, ಕರೋನಾ ತಯಾರಿಕೆಯ ಎಲ್ಲಾ ಮಾದರಿಯ ವಾಹನಗಳ ಹಾಲಿ ಅಸೆಂಬ್ಲಿ ಕಾರ್ಡ್‌ಗಳಿರುವ ರೇಡಿಯೇಟರ್, ಗೇರ್‌ಬಾಕ್ಸ್, ಸೆಲ್ಫ್ ಸ್ಟಾಟರ್, ಅಲ್ಟರ್‌ನೇಟರ್, ರಿಯರ್ ಆಕ್ಸಲ್ ಅಸೆಂಬ್ಲಿ, ಟೈರು ಮತ್ತು ಬ್ಯಾಟರಿ ಹಾಗೂ ಈ ಸುತ್ತೋಲೆಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ವಾಹನಗಳಲ್ಲಿ ಅಳವಡಿಸಿರುವ ಅಸೆಂಬ್ಲಿಗಳಾದ ಇಂಟರ್‌ಕೂಲರ್, ಎಫ್.ಡಿ.ಎಸ್.ಎಸ್. (Fire detection and Suppression System) ಮತ್ತು ಎಫ್.ಡಿ.ಎ.ಎಸ್. (Fire detection and Alaram System) ಗಳನ್ನು ರದ್ದುಪಡಿಸುವ ಅಧಿಕಾರವನ್ನು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ನೀಡಲಾಗಿದ್ದು, ವಿ.ಯಾಂ.ಅಭಿಯಂತರರ ದೃಡಿಕರಣದ ನಂತರ ರದ್ದತಿ ಪ್ರಕ್ರಿಯೆಗೆ ಒಳಪಡಿಸುವುದು. (ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ವಾಹನಗಳ ಅಸೆಂಬ್ಲಿಗಳನ್ನು ಹೊರತುಪಡಿಸಿ)

6. ಪ್ರತಿಷ್ಠಿತ ಹವಾನಿಯಂತ್ರಿತ ವೋಲ್ವೋ, ಸ್ಕ್ಯಾನಿಯ ಮತ್ತು ಮರ್ಸಿಡೀಸ್ ಬೆಂಜ್ ವಾಹನಗಳ ಎಲ್ಲಾ ಅಸೆಂಬ್ಲಿಗಳನ್ನು ವಿಭಾಗಗಳಿಂದ ದೃಡಿಕರಣಗೊಂಡ ನಂತರ (ಟೈರುಗಳನ್ನು ಹೊರತುಪಡಿಸಿ) ಅಸೆಂಬ್ಲಿಗಳನ್ನು ನಿರುಪಯುಕ್ತಗೊಳಿಸುವ ಅಧಿಕಾರವು ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/ಮುಖ್ಯ ಯಾಂತ್ರಿಕ ಅಭಿಯಂತರರು ಕೇಂದ್ರ ಕಛೇರಿರವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

7. ಮೇಲೆ ತಿಳಿಸಿರುವ ಹೊಸದಾಗಿ ಸೇರ್ಪಡಿಸಿರುವ ಅಸೆಂಬ್ಲಿಗಳಿಗೆ ತಪ್ಪದೇ ಅಸೆಂಬ್ಲಿ ಕಾರ್ಡ್‌ಗಳನ್ನು ಹೊಸದಾಗಿ ತೆರದು, ಹಾಲಿ ವಾಹನದಲ್ಲಿ ಕ್ರಮಿಸಿರುವ ಕಿ.ಮೀ. ಗಳನ್ನು ದಾಖಲಿಸಿ, ಮುಂದಿನ ಪ್ರಗತಿ ಕಿ.ಮೀ.ಗಳನ್ನು ಬರೆದು, ಕಿ.ಮೀ. ಗಳನ್ನು ಕಡ್ಡಾಯವಾಗಿ ದಾಖಲಿಸುವುದು.

೮. ನಿಗಧಿಪಡಿಸಿರುವ ನಿರುಪಯುಕ್ತ ಕಿ.ಮೀ. ಕ್ರಮಿಸಿರುವ/15 ವರ್ಷ ಪೂರೈಸಿರುವ ಎಲ್ಲಾ ತಯಾರಿಕೆಯ/ ಮಾದರಿಯ ವಾಹನಗಳನ್ನು ನಿರುಪಯುಕ್ತಗೊಳಿಸುವ ಅಧಿಕಾರವು ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) / ಮುಖ್ಯ ಯಾಂತ್ರಿಕ ಅಭಿಯಂತರರು ರವರಿಗಿರುತ್ತದೆ. ನಿಗಧಿತ ಕಿ.ಮೀ. ಕ್ರಮಿಸದ ಹಾಗೂ 15 ವರ್ಷ ಪೂರೈಸದ ವಾಹನಗಳನ್ನು ನಿರುಪಯುಕ್ತಗೊಳಿಸಬೇಕಾದಂತಹ ವಿಶೇಷ ಪ್ರಕರಣಗಳ ಅಧಿಕಾರವು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ ರವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬಂದಿದ್ದು, ಈ ಸುತ್ತೋಲೆಯು ತಲುಪಿದಕ್ಕೆ ಸ್ವೀಕೃತಿಯನ್ನು ಕಳುಹಿಸುವುದು.

(ಎನ್.ಕೆ.ಬಸವರಾಜು)
**ಮುಖ್ಯ ಯಾಂತ್ರಿಕ ಅಭಿಯಂತರರು**

**ರವರಿಗೆ,**
**ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿ,**
ಕ.ರಾ.ರ.ಸಾ.ನಿಗಮ.

**ಪ್ರತಿಯನ್ನು:**

1. ಹಿರಿಯ ಆಪ್ತ ಕಾರ್ಯದಶಿಗಳು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಹಿರಿಯ ಆಪ್ತ ಕಾರ್ಯದಶಿಗಳು, ಮಾನ್ಯ ನಿರ್ದೇಶಕರು (ಸಿ ಮತ್ತು ಜಾ) ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಎಲ್ಲಾ ಇಲಾಖಾ ಮುಖ್ಯಸ್ಥರು/ ಉಸ್ತುವಾರಿ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿ ಮತ್ತು ಅಗತ್ಯ ಕ್ರಮಗಳಿಗಾಗಿ ಕಳುಹಿಸಲಾಗಿದೆ.
5. ಮುಖ್ಯ ಯಾಂತ್ರಿಕ ಅಭಿಯಂತರರು, ಬೆಂ.ಮ.ನ.ಸಾ.ಸಂ., ಕ.ಕ.ರ.ಸಾ.ಸಂ. ಮತ್ತು ವಾ.ರ.ಸಾ.ಸಂ. ರವರ ಮಾಹಿತಿಗಾಗಿ.
6. ಹಿ/ಕಾರ್ಯ ವ್ಯವಸ್ಥಾಪಕರು/ಕ.ರಾ.ರ.ಸಾ.ನಿಗಮ, ಬೆಂಗಳೂರು/ಹಾಸನ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಪ್ರಾಂಶುಪಾಲರು, ಎಲ್ಲಾ ತರಬೇತಿ ಕೇಂದ್ರ, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ.
8. ಎಲ್ಲಾ ವಿಭಾಗೀಯ ಯಾಂತ್ರಿಕ ಅಭಿಯಂತರರು, ಕ.ರಾ.ರ.ಸಾ.ನಿಗಮ ರವರ ಮಾಹಿತಿ ಮತ್ತು ಅಗತ್ಯ ಕ್ರಮಗಳಿಗಾಗಿ.
9. ಎಲ್ಲಾ ಹಿ/ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.